ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 04/07/2019

## ಕೇಂದ್ರ ಸಚಿವ ಸಂಪುಟ ನಿರ್ಧಾರ

# ಮುಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಳ

4/6/19



**ಇತರ ನಿರ್ಣಯ**

- ವಾಣಿಜ್ಯಕ್ಕೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಮಧ್ಯಸ್ಥಿಕೆದಾರರ ಹೊಣೆ ಹೆಚ್ಚಿಸುವ ರಾಜಿಸಂಧಾನದ (ತಿದ್ದುಪಡಿ) ಮಸೂದೆಗೆ ಒಪ್ಪಿಗೆ
- ವ್ಯಾಪಾರೋದ್ಯಮದಲ್ಲಿ ಸಮೀಪದ ಬಂಧುಗಳನ್ನು ಹೊರತುಪಡಿಸಿ ಬೇರೆಯವರನ್ನು ಬದಲಿ ಪ್ರತಿನಿಧಿಯನ್ನಾಗಿ ನೇಮಿಸುವುದನ್ನು ತಡೆಯುವ ಮಸೂದೆಗೆ ಅನುಮೋದನೆ

ನವದೆಹಲಿ: ರೈತರಿಗೆ ಕೃಷಿ ಸಮ್ಮಾನ್ ಯೋಜನೆ ಘೋಷಿಸಿದ್ದ ಕೇಂದ್ರ ಸರ್ಕಾರ ಅನ್ನದಾತರ ಸಂಕಷ್ಟ ದೂರ ಮಾಡುವ ಮತ್ತೊಂದು ಯತ್ನವಾಗಿ 2019-20ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಏರಿಕೆ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಜತೆಗೆ ಮಂಗಳೂರು ಸೇರಿದಂತೆ ದೇಶದ ಮೂರು ಪ್ರಮುಖ ವಿಮಾನ ನಿಲ್ದಾಣಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಹಾಗೂ ದೇಶಾದ್ಯಂತ ಏಕರೂಪವಾಗಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಮಾಡುವ ವೇತನ ಸಂಹಿತೆ ಮಸೂದೆಗೂ ಒಪ್ಪಿಗೆ ನೀಡಲಾಗಿದೆ.

**ಕನಿಷ್ಠ ವೇತನ ಏಕರೂಪಕ್ಕೆ ಮಸೂದೆ:** ಕಾರ್ಮಿಕರ ಕುರಿತ ವಿವಿಧ ಕಾನೂನುಗಳನ್ನು ಏಕರೂಪಗೊಳಿಸಿರುವ ವೇತನ ಸಂಹಿತೆ ಮಸೂದೆಯನ್ನು ಸಚಿವ ಸಂಪುಟ ಅನುಮೋದಿಸಿದೆ. ಉದ್ದೇಶಿತ ಮಸೂದೆಯ ನಾಲ್ಕು ಅಂಶಗಳು ಪ್ರಸ್ತುತ ಜಾರಿಯಲ್ಲಿರುವ 44 ಕಾನೂನುಗಳನ್ನು ಒಳಗೊಳ್ಳಲಿದೆ. ಇದರಿಂದ ಇಡೀ ದೇಶದಲ್ಲಿ ಕಾರ್ಮಿಕ ಕನಿಷ್ಠ ವೇತನವನ್ನು ಏಕರೂಪಗೊಳಿಸಲು ಉದ್ದೇಶಿಸಲಾಗಿದೆ.